DFA/897901

**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 661 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.09.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೋಕ್ರೈನಾಲಜಿ ರೀಸರ್ಚ್ ಬೆಂಗಳೂರು ಇಲ್ಲಿ ನೀಡುತ್ತಿರುವ ಚಿಕಿತ್ಸಾ ಗುಣಮಟ್ಟವು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಕರ್ನಾಟಕ ಎಂಡೋಕ್ರೈನಾಲಜಿ ಮತ್ತು ರೀಸರ್ಚ್ ಸಂಸ್ಥೆ, ಬೆಂಗಳೂರು ಇಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದ್ದು, ಚಿಕಿತ್ಸೆ ಪಡೆದ ರೋಗಿಗಳ ವಿವರ ಈ ಕೆಳಕಂಡಂತಿದೆ. (ಕೆಳಗಿನ ಪಟ್ಟಿ ನೋಡಿ) |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ; | ಮೇಲಿನಂತೆ ಉದ್ಭವಿಸುವುದಿಲ್ಲ |
| ಇ) | ಈ ಸಂಸ್ಥೆಗೆ ಖಾಯಂ ಆಡಳಿತ ಅಧಿಕಾರಿ ಇಲ್ಲದೆ ಬೇರೆ ಸಂಸ್ಥೆಯವರು ಉಸ್ತುವಾರಿ ವಹಿಸಿರುವುದಕ್ಕೆ ಈ ರೀತಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಸಂಸ್ಥೆಯ ಉಸ್ತುವಾರಿ ಆಡಳಿತಾಧಿಕಾರಿಗಳು ಸಂಸ್ಥೆಯ ಆಡಳಿತ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುತ್ತಾರೆ. |
| ಈ) | ಹಾಗಿದ್ದಲ್ಲಿ, ಈ ಸಂಸ್ಥೆಗೆ ಖಾಯಂ ಆಡಳಿತ ಅಧಿಕಾರಿ ನೇಮಕ ಮಾಡಿ, ಚಿಕಿತ್ಸೆ ವ್ಯವಸ್ಥೆ ಸುಧಾರಿಸುವ ಕಾರ್ಯ ಮಾಡುವುದು ಯಾವಾಗ ? | ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 163 ಸಉಸೇ 2022, ದಿನಾಂಕ:12.08.2022 ರಲ್ಲಿ ಸರ್ಕಾರವು ಖಾಯಂ ಆಡಳಿತಾಧಿಕಾರಿಯವರನ್ನು ಸಂಸ್ಥೆಗೆ ನಿಯೋಜಿಸಿತ್ತು. ಆದರೆ ಸದರಿ ಆಡಳಿತಾಧಿಕಾರಿಯವರ ಅನಾರೋಗ್ಯದ ನಿಮಿತ್ತ ಸಂಸ್ಥೆಯ ಆಡಳಿತಾಧಿಕಾರಿ ಹುದ್ದೆಯ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತಾರೆ. ಆದುದರಿಂದ<br>ಖಾಯಂ ಆಡಳಿತಾಧಿಕಾರಿ ಹುದ್ದೆ ಭರ್ತಿಗೆ ಸಿಆಸು ಇಲಾಖೆಯನ್ನು ಕೋರಲು ಕ್ರಮವಹಿಸಲಾಗುತ್ತಿದೆ. |

| ವರ್ಷ | ನೂತನ ರೋಗಿಗಳ ಸಂಖ್ಯೆ | ಪುನರ್ ಭೇಟಿ ನೀಡಿರುವ ರೋಗಿಗಳ ಸಂಖ್ಯೆ |
|---|---|---|
| 2020-21 | 4744 | 26625 |
| 2021-22 | 7916 | 29935 |
| 2022-23 (ಏಪ್ರಿಲ್‌ನಿಂದ ಆಗಸ್ಟ್‌ವರೆಗೆ) | 3719 | 14334 |

ಸಂಖ್ಯೆ: ಎಂಇಡಿ 426 ಎಂಪಿಎಸ್ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.



Generated from eOffice by DR.K SUDHAKAR, MED-MIN(SK), MINISTER, MEDICAL EDUCATION SEC on 19/09/2022 01:07 PM